## ಹ್ಯಾಂಡ್‌ಮೇಡ್ ನೋಟು

ಟಿಬೇಟಿನ ಸ್ಟ್ರಾಂಗ್ (Strong) ಎನ್ನುವ ಈ ನೋಟು 1937ರ ಅವಧಿಯಲ್ಲಿ ಚಲಾವಣೆಯಲ್ಲಿತ್ತು. ಸಾಮಾನ್ಯವಾಗಿ ನೋಟುಗಳು ಯಂತ್ರಗಳಲ್ಲಿ ಪ್ರಿಂಟ್ ಮಾಡುತ್ತಾರೆ. ಆದರೆ, ಈ ನೋಟು ಹ್ಯಾಂಡ್‌ಮೇಡ್ (ಕೈಯಲ್ಲಿ ಮಾಡಿದ್ದು) ಎಂಬುದು ವಿಶೇಷ! 215 ಮಿಲಿ ಮೀಟರ್, ಉದ್ದ 138 ಮಿಲಿ ಮೀಟರ್ ಅಗಲ ಇರುವ ಈ ನೋಟು ಕೇಸರಿ ಹಾಗೂ ಹಳದಿ ಬಣ್ಣದಿಂದ ಕೂಡಿದೆ. ಈ ನೋಟು 100. ಸ್ಟ್ಯಾಂಗ್ ಆಗಿದೆ.

**■ ಈರಣ್ಣ ಬೆಂಗಾಲಿ, ರಾಯಚೂರು**





## ಜಡೆಯಂತೆ ಸುತ್ತಿಕೊಂಡ ಮರಗಳು

ಚಿತ್ರದುರ್ಗದ ಮೆದೇಹಳ್ಳಿ ರಸ್ತೆಯ ಈಶ್ವರ–ಆಂಜನೇಯ ದೇವಸ್ಥಾನದ ಬಳಿಯಿರುವ ಈ ನಾಗರಕಟ್ಟೆಯ ಬಳಿ ಆಲದ–ಬೇವಿನ ಮರಗಳು ಪರಸ್ಪರ ಜಡೆಯಂತೆ ಸುತ್ತಿಕೊಂಡಿವೆ. ಒಂದೂವರೆ–ಎರಡು ಅಡಿ ಅಂತರದಲ್ಲಿ ಮರಗಳನ್ನು ನೆಟ್ಟಿದ್ದರೂ ಅದರ ಟಿಸಿಲು ಕೊಂಬೆಗಳು ಸೇರಿ ಕೊಂಡಿದೆ. 2–4 ಸುತ್ತು ಮೇಲ್ಭಾಗದವರೆಗೂ ಸೇರಿವೆ.

**■ ಡಾ. ಕೆ.ವಿ. ಸಂತೋಷ್, ಚಿತ್ರದುರ್ಗ**

## ಸ್ಟೀಫನ್ ಹಾಕಿಂಗ್

ಸ್ಟೀಫನ್ ಹಾಕಿಂಗ್ ಖ್ಯಾತ ಖಗೋಳ ವಿಜ್ಞಾನಿ. ಇವರು ಅಂಗವಿಕಲರೂ ಹೌದು. ಸದಾ ಖುರ್ಚಿಯ ಮೇಲೆ ಆಸೀನರಾಗಿ ಖಗೋಳ ಶಾಸ್ತ್ರದ ಬಗ್ಗೆ ಸಂಶೋಧನೆ ಮಾಡಿದ್ದು ಗಮನಾರ್ಹ. ಪ್ರಪಂಚಕ್ಕೆ ಇವರ ಕೊಡುಗೆ ಅತ್ಯಮೂಲ್ಯ. ಇವರ ಜೀವನದ ಸಾಧನೆಯ ಸ್ಮರಣಾರ್ಥ ಯುರೋಪ್ ಖಂಡದಲ್ಲಿ 50 ಪೈಸೆ ನಾಣ್ಯ ಬಿಡುಗಡೆ ಮಾಡಲಾಗಿದೆ. ಸೂಕ್ಷ್ಮವಾಗಿ ಗಮನಿಸಿದರೆ ಈ ನಾಣ್ಯದ ಚಿತ್ರದಲ್ಲಿ ಬ್ಲಾಕ್ ಹೋಲ್ ಕಾಣಬಹುದಾಗಿದೆ. ದುರಂತವೆಂದರೆ ಈ ವಿಜ್ಞಾನಿ ಕಳೆದ ವರ್ಷ ನಿಧನರಾಗಿದ್ದಾರೆ.

**■ ಪಂಡಿತರಾವ ಪಾಟೀಲ, ಸರಸಂಬಾ**

